# ತಂತ್ರಜ್ಞಾನ ಕಲಿಕೆಗೆ ವರದಾನ

## TALP ( TECHNOLOGY ASSISTED LEARNING PROGRAMME )







ಡಾ.ಎಚ್.ಬಿ.ಚಂದ್ರಶೇಖರ್, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ., ಬೆಂಗಳೂರು ಮೊ–7349372709,


ಒಂದು ಚಿತ್ರವು ನೂರು ಪದಗಳಿಗೆ ಸಮ ಎನ್ನಲಾಗುತ್ತದೆ. ಅದರಲ್ಲೂ ಪರಿಣಾಮಕಾರಿಯಾಗಿ ನಿರ್ಮಿಸಿರುವ ಒಂದು ವಿಡಿಯೋ ಸಾವಿರಾರು ಪದಗಳಲ್ಲಿ ಹೇಳುವುದನ್ನು ಸರಳವಾಗಿ ಮನಮುಟ್ಟುವಂತೆ ತಿಳಿಸಬಲ್ಲದು. ಈ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬೋಧನೆಯಲ್ಲಿ ಬಳಸಿಕೊಂಡಲ್ಲಿ ಕಲಿಕೆ ಆಕರ್ಷಕ, ಸುಲಭ, ಸರಳ ಹಾಗೂ ಪರಿಣಾಮಕಾರಿಯಾಗುತ್ತದೆ.

ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಂಪ್ಯೂಟರ್ ಬಳಕೆಯ ಮೂಲಕ ಪ್ರೌಢಶಾಲಾ ಹಂತದಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡುವ ಪ್ರಯತ್ನಗಳು ಮಾಹಿತಿ ಸಿಂಧು ಯೋಜನೆಯಿಂದ ರಾಜ್ಯ ಸರ್ಕಾರದ ಅನುದಾನದಲ್ಲಿ ಪ್ರಾರಂಭಗೊಂಡಿತು. ಅದೇ ವೇಳೆಗೆ ಸರ್ವ ಶಿಕ್ಷಣ ಅಭಿಯಾನದ ಮೂಲಕ ಕಂಪ್ಯೂಟರ್ ಆಧಾರಿತ ಕಲಿಕಾ ಕಾರ್ಯಕ್ರಮದಡಿ ರಾಜ್ಯದ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣ ನೀಡುವ ಕಾರ್ಯಕ್ರಮ ಅನುಷ್ಠಾನ ಮಾಡಲಾಯಿತು. ಮಾಹಿತಿ ಸಿಂಧು ಯೋಜನೆಯಡಿ 2000–2001 ರಿಂದ 2009–10ನೇ ಸಾಲಿನವರೆಗೆ 2009 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನ ಮಾಡಲಾಯಿತು. ಹನ್ನೊಂದನೇ ಹಣಕಾಸು ಯೋಜನೆಯಡಿ 88 ಸರ್ಕಾರಿ ಪ್ರೌಢಶಾಲೆಗಳು, ರಿವೈಸ್ಡ್ ಕ್ಲಾಸ್ ಯೋಜನೆಯಡಿ 150 ಸರ್ಕಾರಿ ಪ್ರೌಢಶಾಲೆಗಳು, ಐ.ಸಿ.ಟಿ. ಫೇಸ್–1 ಯೋಜನೆಯಡಿ 480 ಸರ್ಕಾರಿ ಪ್ರೌಢಶಾಲೆಗಳು, ಐ.ಸಿ.ಟಿ. ಪೇಸ್–2 ಯೋಜನೆಯಡಿ 1571 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಗೂ Digital Initiatives Under SSK ಅಡಿ 615 ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ವಿವಧ ಪ್ರಾಯೋಜಿತ ಕಾರ್ಯಕ್ರಮದಡಿ ಅನುಷ್ಠಾನ ಮಾಡಲಾಗಿದೆ.

**ಟಾಲ್ಪ್-TALP (Technology Assisted Learning Programme)** 2016–17 ರವರೆಗೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅನುಷ್ಠಾನ ಮಾಡಲಾದ ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮವನ್ನು ಬಾಹ್ಯ ಏಜೆನ್ಸಿಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿತ್ತು. ಏಜೆನ್ಸಿಗಳ ಮೂಲಕ ನೇಮಕವಾದ ಕಂಪ್ಯೂಟರ್ ಶಿಕ್ಷಕರ ಮೂಲಕ ಕಂಪ್ಯೂಟರ್ ಸಾಕ್ಷರತಾ ಶಿಕ್ಷಣ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ನೀಡಲಾಗುತ್ತಿತ್ತು. ಕಂಪ್ಯೂಟರ್ ಕಲಿಕೆ ಹಾಗೂ ಬೋಧನೆಯಲ್ಲಿ ಕಂಪ್ಯೂಟರ್ ಬಳಕೆಯಲ್ಲಿ ಶಾಲಾ ಶಿಕ್ಷಕರನ್ನು ತೊಡಗಿಸಿಕೊಳ್ಳದೇ ಇದ್ದ ಕಾರಣ ಶಾಲಾ ಶಿಕ್ಷಕರಲ್ಲಿ ಕಂಪ್ಯೂಟರ್ ಶಿಕ್ಷಣದ ಕುರಿತು ಮಾಲೀಕತ್ವದ (Ownership) ಕೊರತೆ ಇತ್ತು. ಇದರ ಜೊತೆ ತಮ್ಮ ಶಾಲಾ ಬೋಧನೆಗೆ ತಕ್ಕಂತೆ ಅಗತ್ಯವಾದ ಕಿರು ವಿಡಿಯೋಗಳ ರೂಪದಲ್ಲಿ ಸಂಪನ್ಮೂಲಗಳನ್ನು ಸೃಜಿಸುವ ತಜ್ಞತೆಯ ಕೊರತೆ ಶಿಕ್ಷಕರಲ್ಲಿತ್ತು. ಶಾಲಾ ಬೋಧನೆಗೆ ಅಗತ್ಯವಾದ ಸಂಪನ್ಮೂಲಗಳು ಶಿಕ್ಷಕರಿಗೆ ಅಗತ್ಯವಾದಲ್ಲಿ ಅವರು ವಿವಿಧ ಜಾಲತಾಣಗಳು, ಹೊರಗುತ್ತಿಗೆ ಏಜೆನ್ಸಿಯಿಂದ ನೇಮಕವಾದ ಶಿಕ್ಷಕರು, ಇತರೆ ಬಾಹ್ಯ ಏಜೆನ್ಸಿಗಳಂತಹ ಇತರೆ ಮೂಲಗಳನ್ನು ಅವರು ಆಶ್ರಯಿಸಬೇಕಿತ್ತು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮಕ್ಕೆ ಹೊಸ ರೂಪ ನೀಡಲು ಸರ್ಕಾರವು 2016–17ನೇ ಸಾಲಿನಲ್ಲಿ ನಿರ್ಧರಿಸಿತು. ಕೇರಳ ರಾಜ್ಯದ ಶಾಲೆಗಳಲ್ಲಿ ಐಸಿಟಿ ಯೋಜನೆಯು ಯಶಸ್ವಿಯಾಗಿ ಅನುಷ್ಠಾನವಾಗುತ್ತಿದ್ದನ್ನು ಮನಗಂಡ ಶಿಕ್ಷಣ ಇಲಾಖೆಯ ತಂಡವು ಕೇರಳ ರಾಜ್ಯಕ್ಕೆ ಭೇಟಿ ನೀಡಿ, ಮಾಹಿತಿ ಪಡೆದು, ವರದಿ ಸಲ್ಲಿಸಿತು. ಇದರ ಆಧಾರದ ಮೇಲೆ ರಾಜ್ಯಕ್ಕೆ ಸರಿಹೊಂದುವಂತೆ 2016–17ನೇ ಸಾಲಿನಿಂದ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮವನ್ನು (Technology Assisted Learning Programme-TALP) 8 ರಿಂದ 12ನೇ ತರಗತಿಗಳವರೆಗೆ ಅನುಷ್ಠಾನ ಮಾಡಲು 2016–17ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಯಿತು.

ಹಿಂದಿನ ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮಗಳಿಗಿಂತ ಟ್ಯಾಲ್ಪ್ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡ ಭಿನ್ನತೆ ಹಾಗೂ ವಿಶೇಷತೆ ಎಂದರೆ ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರೊಜೆಕ್ಟರ್‌ಗಳನ್ನು ಶಾಲೆಗಳಿಗೆ ಪೂರೈಸುವುದಕ್ಕಿಂತ ಪೂರ್ವದಲ್ಲಿ ಶಿಕ್ಷಕರಿಗೆ ಕಂಪ್ಯೂಟರ್ ಬಳಕೆಯ ಕುರಿತು ಹಾಗೂ ಅವರು ಬೋಧಿಸುವ ವಿಷಯದಲ್ಲಿ ಸಂಪನ್ಮೂಲಗಳ ಸೃಜನೆ, ಬಳಕೆಯ ಕುರಿತು






ಪರಿಣಾಮಕಾರಿಯಾದ ತರಬೇತಿಯನ್ನು ನೀಡುವ ಅಂಶ. ಈ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಕಂಪ್ಯೂಟರ್ ಬಳಕೆಯ ಕುರಿತಂತೆ 10 ದಿನಗಳ ಬುನಾದಿ ತರಬೇತಿ ನೀಡಲು ಎನ್.ಸಿ.ಇ.ಆರ್.ಟಿ.ಯ ಅಂಗಸಂಸ್ಥೆ ಸಿ.ಐ.ಇ.ಟಿ.ರವರು ರೂಪಿಸಿದ ಪಠ್ಯಕ್ರಮದ ಅನುಸಾರ ಕ್ರಮ ಕೈಗೊಳ್ಳಲಾಯಿತು. ಬುನಾದಿ ತರಬೇತಿಯು ಕಂಪ್ಯೂಟರ್ ಬಳಕೆಯನ್ನು ಆರಂಭಿಸುವ ಶಿಕ್ಷಕ–ರಿಗೆ ಮೊದಲು ನೀಡುವ ತರಬೇತಿಯಾಗಿದೆ. ಈ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರು 10 ದಿನಗಳ ಪುನಶ್ಚೇತನ ತರಬೇತಿಯನ್ನು ಪಡೆಯಬೇಕಿರುತ್ತದೆ. ಮೂರನೇ ಹಂತದಲ್ಲಿ 5 ದಿನಗಳ ಬುನಾದಿ–2 ತರಬೇತಿಯನ್ನು ಪಡೆಯಬೇಕಿರುತ್ತದೆ. ಈ ಹಂತಗಳನ್ನು ದಾಟಿದ ಶಿಕ್ಷಕರು ಮುಂದುವರೆದ ಪುನಶ್ಚೇತನ ತರಬೇತಿ ಹಾಗೂ ಬುನಾದಿ–3 ತರಬೇತಿಗಳನ್ನು ಪಡೆಯಲು ಅವಕಾಶವನ್ನು ಕಲ್ಪಿಸಿದೆ.

ಟ್ಯಾಲ್ಪ್ ತರಬೇತಿಗೆ ನಿಯೋಜಿಸಲ್ಪಟ್ಟ ಶಿಕ್ಷಕರನ್ನು ictcurriculum.gov.in ಜಾಲತಾಣದಲ್ಲಿ ನೋಂದಣಿ ಮಾಡಿಸಲಾಗುತ್ತದೆ ಹಾಗೂ ಅವರಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಕುರಿತಂತೆ ಇರುವ ಆರಂಭಿಕ ಹಂತದ ಜ್ಞಾನ, ತಿಳುವಳಿಕೆಯ ಮಾಪನವನ್ನು ಮಾಡಲಾಗುತ್ತದೆ. ಎಷ್ಟೋ ಶಿಕ್ಷಕರಿಗೆ ಕಂಪ್ಯೂಟರ್ ಬಳಕೆಯ ಕುರಿತಂತೆ ಪ್ರಾಥಮಿಕ ಜ್ಞಾನ ಹೊಂದಿರುವುದಿಲ್ಲ. ಕಂಪ್ಯೂಟರ್‌ನ ವಿವಿಧ ಭಾಗಗಳಾದ ಮೌಸ್, ಕೀ ಬೋರ್ಡ್, ಮಾನಿಟರ್, ಇತ್ಯಾದಿಗಳ ಪರಿಚಯ ಇರುವುದಿಲ್ಲ. ಕಂಪ್ಯೂಟರ್‌ನ್ನು ಸ್ವಿಚ್ ಆನ್ ಮಾಡುವುದು ಹಾಗೂ ಆಫ್ ಮಾಡುವ ಕುರಿತಂತೆ ತಿಳುವಳಿಕೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ಬುನಾದಿ–1 ತರಬೇತಿಯಲ್ಲಿ ಕಂಪ್ಯೂಟರ್ ಬಳಕೆಯ ಕುರಿತಂತೆ ಆರಂಭಿಕ ಮಾಹಿತಿಯಿಂದ ಕಲಿಸಲಾಗುತ್ತದೆ.

10 ದಿನಗಳ ತರಬೇತಿ ಪೂರ್ಣಗೊಳಿಸಿದ ಶಿಕ್ಷಕರು ಸಿದ್ಧಪಡಿಸಿ, ಆನ್‌ಲೈನ್ ಮೂಲಕ ಸಲ್ಲಿಸಿದ ನಿಯೋಜಿತ ಕಾರ್ಯಗಳ ಪರಿಶೀಲನೆ ನಡೆಸಿ, ಅವರಿಗೆ ಎ, ಬಿ, ಸಿ, ಡಿ ಎಂಬ ದರ್ಜೆಗಳನ್ನು (ಗ್ರೇಡಿಂಗ್) ನೀಡಲಾಗುತ್ತದೆ. ಎ, ಬಿ, ಸಿ ದರ್ಜೆ ಪಡೆದ ಶಿಕ್ಷಕರಿಗೆ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ಎನ್.ಸಿ.ಇ.ಆರ್.ಟಿ. ರವರು ಆನ್‌ಲೈನ್‌ನಲ್ಲಿ ಅಳವಡಿಸುತ್ತಾರೆ. ಸಂಬಂಧಿಸಿದ ಶಿಕ್ಷಕರು ತರಬೇತಿ ಪೂರ್ಣ ಮಾಡಿದ ಪ್ರಮಾಣಪತ್ರವನ್ನು ಪಡೆದುಕೊಳ್ಳುತ್ತಾರೆ.

2016–17 ರಲ್ಲಿ ಟ್ಯಾಲ್ಪ್ ಕಾರ್ಯಕ್ರಮ ಪ್ರಾರಂಭವಾದ ಸಮಯದಲ್ಲಿ 11 ಮುಖ್ಯ ಸಂಪನ್ಮೂಲ ವ್ಯಕ್ತಿಗಳು, 11 ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ 136 ಪ್ರಧಾನ ಸಂಪನ್ಮೂಲ ವ್ಯಕ್ತಿಗಳು ಶಿಕ್ಷಕರ ತರಬೇತಿಗಾಗಿ ಸಿದ್ಧಗೊಂಡರು. ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ಸಿದ್ಧಗೊಂಡರು. 2016–17 ರಿಂದ ಇಲ್ಲಿಯವರೆಗೆ ರಾಜ್ಯದ 40,352 ಪ್ರೌಢಶಾಲಾ ಶಿಕ್ಷಕರ ಪೈಕಿ 38,632 ಶಿಕ್ಷಕರು ಬುನಾದಿ ತರಬೇತಿಯನ್ನು ಹಾಗೂ 9,664 ಶಿಕ್ಷಕರು ಪುನಶ್ಚೇತನ ತರಬೇತಿಯನ್ನು ಪಡೆದುಕೊಂಡಿದ್ದಾರೆ.

ಟ್ಯಾಲ್ಪ್ ತರಬೇತಿ ಪಡೆದ ಶಿಕ್ಷಕರು ಇ–ಸಂಪನ್ಮೂಲಗಳ ಸೃಜನೆಯನ್ನು ಮಾಡಿದ್ದು, ಈವರೆಗೆ 18,000 ಕ್ಕೂ ಅಧಿಕ ಸಂಪನ್ಮೂಲಗಳನ್ನು ಸೃಜಿಸಿರುತ್ತಾರೆ. ಈ ಸಂಪನ್ಮೂಲಗಳನ್ನು ದೀಕ್ಷಾ (Digital Infrastructure for Knowledge Sharing-DIKSHA: https://diksha.gov.in/) ಜಾಲತಾಣದಲ್ಲಿ ಅಳವಡಿಸಲಾಗಿದೆ. ಈ ಜಾಲತಾಣದಲ್ಲಿ ಕರ್ನಾಟಕ ರಾಜ್ಯದ ಲಿಂಕ್‌ಗೆ ಹೋಗಿ ಅಲ್ಲಿ ಅಳವಡಿಸಲಾಗಿರುವ ವಿವಿಧ ತರಗತಿಗಳ ವಿಡಿಯೋಗಳನ್ನು ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇದರಲ್ಲಿ ಡಿ.ಎಸ್.ಇ.ಆರ್.ಟಿ.ಯಿಂದ ಸೃಜನೆಯಾಗಿರುವ ಹತ್ತನೇ ತರಗತಿಯ ವಿದ್ಯಾರ್ಥಿಗಳ ಪರೀಕ್ಷಾ ಸಿದ್ಧತೆಯ ವಿಡಿಯೋಗಳಾದ ಪರೀಕ್ಷಾವಾಣಿ, ದೂರದರ್ಶನ ಚಂದನವಾಹಿನಿಯಲ್ಲಿ ಪ್ರಸಾರವಾದ ಸಂವೇದ ತರಗತಿಯ ವಿಡಿಯೋಗಳು ಹಾಗೂ ಶಿಕ್ಷಕರಿಂದ ಸೃಜನೆಯಾದ ವಿಡಿಯೋಗಳನ್ನು ತರಗತಿವಾರು, ಮಾಧ್ಯಮವಾರು ವ್ಯವಸ್ಥಿತವಾಗಿ ಅಳವಡಿಸಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕೆ ಲಭ್ಯವಿವೆ. ದೀಕ್ಷಾ ಜಾಲತಾಣದಲ್ಲಿ ಇರುವ ಎಲ್ಲಾ ಇ–ಸಂಪನ್ಮೂಲಗಳನ್ನು ದೀಕ್ಷಾ ಮೊಬೈಲ್ ಆಪ್‌ನಲ್ಲಿಯೂ ಲಭ್ಯವಿವೆ. ಮೊಬೈಲ್ ಆಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು, ವಿಡಿಯೋಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಇದರ ಜೊತೆ ಡಿ.ಎಸ್.ಇ.ಆರ್.ಟಿ.ಯ ಯುಟ್ಯೂಬ್ ಚಾನಲ್‌ಗಳಾದ ಜ್ಞಾನದೀಪ (https://youtube.com/channel/UCYXGup-94ByD1Lb6woVs_oGA) ಹಾಗೂ ಮಕ್ಕಳವಾಣಿಗಳಲ್ಲಿಯೂ (https://youtube.com/c/MakkalaVani) ವಿಡಿಯೋಗಳನ್ನು ಅಳವಡಿಸಲಾಗಿದೆ. ದೀಕ್ಷಾ ಜಾಲತಾಣದಲ್ಲಿ ಖಾನ್ ಅಕಾಡೆಮಿ,

ಅಮೃತ ಓ ಲ್ಯಾಬ್ಸ್, ಇಂಡಿಯಾ ಲಿಟರೆಸಿ ಪ್ರಾಜೆಕ್ಟ್, ಇತ್ಯಾದಿ ಸರ್ಕಾರೇತರ ಸಂಸ್ಥೆಗಳು ಸೃಜಿಸಿದ ಇ-ಸಂಪನ್ಮೂಲಗಳನ್ನು ಸ್ಥಳೀಕರಿಸಿ, ದೀಕ್ಷಾ ಜಾಲತಾಣದಲ್ಲಿ ಅಡಕಗೊಳಿಸಲಾಗಿದೆ. ಎಡುಸ್ಯಾಟ್ ಕಾರ್ಯಕ್ರಮದಡಿ ಸೃಜಿಸಿದ ವಿಡಿಯೋಗಳು, ಟ್ಯಾಲ್ಪ್ ಬುನಾದಿ ತರಬೇತಿ ವಿಡಿಯೋಗಳು, ಖಾನ್ ಅಕಾಡೆಮಿ ವಿಡಿಯೋಗಳು, ಇತ್ಯಾದಿಗಳನ್ನು ಡಿ.ಎಸ್.ಇ.ಆರ್.ಟಿ. ಜಾಲತಾಣದಲ್ಲಿ (http://dsert.kar.nic.in/kasp/learning_material.asp ) ಅಳವಡಿಸಲಾಗಿದೆ.

ಟ್ಯಾಲ್ಪ್ ತರಬೇತಿ ಪಡೆದ ಶಿಕ್ಷಕರು ಶಾಲಾ ಬೋಧನೆಯಲ್ಲಿ ಕಂಪ್ಯೂಟರ್ ಬಳಕೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದು, ವಿದ್ಯಾರ್ಥಿಗಳ ಕಲಿಕೆಯಲ್ಲಿ ಪೂರಕ ಬದಲಾವಣೆಗಳಾಗಿರುವುದನ್ನು ಗಮನಿಸಲಾಗಿದೆ.

ಟ್ಯಾಲ್ಪ್ ತರಬೇತಿ ಹೊಂದಿದ ಶಿಕ್ಷಕರು ಇರುವ ಪ್ರತಿ ಶಾಲೆಗೆ ಒಂದು ಲ್ಯಾಪ್‌ಟಾಪ್ ಹಾಗೂ ಒಂದು ಪ್ರೊಜೆಕ್ಟರ್ ಅನ್ನು ಒದಗಿಸಲಾಗಿದೆ. ನಂತರ ಅಂತಹ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ. 2018-19ನೇ ಸಾಲಿನಲ್ಲಿ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಗೂ 2019-20 ರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಿಂದ ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯ 6 ಜಿಲ್ಲೆಗಳ 718 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯ ಸ್ಥಾಪಿಸಲಾಗಿದೆ. ಡಿ.ಎಸ್.ಇ.ಆರ್.ಟಿ.ವತಿಯಿಂದ ಖರೀದಿಸಿ, ಶಾಲೆಗಳಿಗೆ ಒದಗಿಸಲಾಗುತ್ತಿರುವ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳಲ್ಲಿ ಇ-ಸಂಪನ್ಮೂಲಗಳನ್ನು ಮುಂಚೆಯೇ ಅಳವಡಿಸಿ, ಶಾಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಟೆಲಿ ಶಿಕ್ಷಣ ಜಾರಿಯಲ್ಲಿದ್ದ 23 ಜಿಲ್ಲೆಗಳ 1000 ಸರ್ಕಾರಿ ಶಾಲೆಗಳಲ್ಲಿ ಲಭ್ಯ ಇರುವ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್ ಬಳಕೆ ಮಾಡಿಕೊಂಡು, ವಿವಿಧ ಇ-ಸಂಪನ್ಮೂಲಗಳನ್ನು ಶಾಲಾ ಬೋಧನೆಯಲ್ಲಿ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ. ಟೆಲಿಶಿಕ್ಷಣ ಯೋಜನೆಯಡಿ 6 ರಿಂದ 10ನೇ ತರಗತಿಯ ವಿಜ್ಞಾನ, ಗಣಿತ, ಇಂಗ್ಲೀಷ್ ವಿಷಯಗಳಿಗೆ ಸಂಬಂಧಿಸಿದಂತೆ ಸೃಜಿಸಲಾದ 1300ಕ್ಕೂ ಅಧಿಕ ವಿಡಿಯೋಗಳನ್ನು ಸಂಬಂಧಿಸಿದ ಶಾಲೆಗಳ ಲ್ಯಾಪ್‌ಟಾಪ್‌ನಲ್ಲಿ ಅಳವಡಿಸಿ, ಬೋಧಿಸಲು ಕ್ರಮವಹಿಸಲಾಗುತ್ತಿದೆ. ಜೊತೆಗೆ ಈ ವಿಡಿಯೋಗಳನ್ನು ಡಿ.ಎಸ್.ಇ.ಆರ್.ಟಿ.ಯ ಯೂಟ್ಯೂಬ್ ಚಾನಲ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಟ್ಟಿನಲ್ಲಿ ಟ್ಯಾಲ್ಪ್ ಕಾರ್ಯಕ್ರಮವು ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಅನುಕೂಲಕರವಾಗಿದ್ದು, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವರದಾನವಾಗಿದೆ ಎನ್ನಬಹುದು.

## ಅಕ್ಷರ ಫೌಂಡೇಶನ್ ಅವರ ಪ್ರತಿಬಿಂಬ ಪಾಡ್ಕಾಸ್ಟ್

### ಶಿಕ್ಷಕರಿಂದ ಶಿಕ್ಷಕರಿಗಾಗಿ...

**ಕೆ. ವೈಜಯಂತಿ,** ನಿರ್ದೇಶಕರು, ಆರ್ & ಇ, ಅಕ್ಷರ ಫೌಂಡೇಶನ್, ಬೆಂಗಳೂರು.

ಕಳೆದ ಕೆಲವು ವರ್ಷಗಳಿಂದ, ಕರ್ನಾಟಕದಾದ್ಯಂತ ಗಣಿತ ಕಲಿಕಾ ಆಂದೋಲನವನ್ನು ಸಮಗ್ರ ಶಿಕ್ಷಣ ಕರ್ನಾಟಕವು ಅಕ್ಷರ ಫೌಂಡೇಶನ್ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ಕೋವಿಡ್-19ರ ಕಾರಣದಿಂದಾಗಿ ಸರ್ಕಾರಿ ಶಾಲೆಗಳ ಪುನಾರಾರಂಭವು ಅನಿಶ್ಚಿತವಾಗಿದ್ದುದ-ರಿಂದ, ಅಕ್ಷರ ಫೌಂಡೇಶನ್, ಮಕ್ಕಳ ಗುಣಾತ್ಮಕ ಕಲಿಕೆಗೆ ಶ್ರಮಿಸುತ್ತಿರುವ ಎಲ್ಲಾ ಶಿಕ್ಷಕರಿಗೂ ತಮ್ಮ ತರಗತಿ ಅನುಭವಗಳು, ಯಶಸ್ಸಿನ ಕಥೆಗಳು, ಅನಿಸಿಕೆ-ಅಭಿಪ್ರಾಯಗಳು ಹಾಗೂ ಉತ್ತಮ ಕಲಿಕಾ ವಿಧಾನಗಳನ್ನು ಕರ್ನಾಟಕ ರಾಜ್ಯದಾದ್ಯಂತ ಇರುವ ಶಿಕ್ಷಕ ಮತ್ತು ಇಲಾಖೆಯ ಸಿಬ್ಬಂದಿ ವರ್ಗದೊಂದಿಗೆ ಹಂಚಿಕೊಳ್ಳಲು ಪ್ರತಿಬಿಂಬ- ಶಿಕ್ಷಕರಿಂದ ಶಿಕ್ಷಕರಿಗಾಗಿ.. ಎಂಬ ಒಂದು ವಿಭಿನ್ನ ವೇದಿಕೆಯನ್ನು ಕಲ್ಪಿಸಿದೆ. ಅಕ್ಟೋಬರ್ 2020 ರಲ್ಲಿ ಪ್ರಾರಂಭವಾದ ಪ್ರತಿಬಿಂಬ ಪಾಡ್ಕಾಸ್ಟ್, ಧ್ವನಿಸುರುಳಿ ಸರಣಿಯಾಗಿದ್ದು, ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಭಾಗಿಯಾಗಿರುವ ಎಲ್ಲರಿಗೂ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಪರಸ್ಪರ ಕಲಿಯಲು ಒಂದು ವೇದಿಕೆಯಾಗಿದೆ. ಇದು ಕರ್ನಾಟಕದ ಸರ್ಕಾರಿ-ಪ್ರಾಥಮಿಕ ಶಾಲೆಗಳಿಂದ ಹೊರಹೊಮ್ಮಿದ ಸಕಾರಾತ್ಮಕ ಕಥೆಗಳನ್ನು ಹೊರತರುತ್ತದೆ ಮತ್ತು ಹಂಚಿಕೊಳ್ಳುತ್ತದೆ.

ಶಿಕ್ಷಕರಿಗೆ ಪ್ರೇರೇಪಣೆಯಾಗುವಂತೆ ಹಾಗೂ ಪರಸ್ಪರ ಕಲಿಕೆಗೆ ಪೂರಕವಾಗುವಂತಹ ಧ್ವನಿ ಸುರುಳಿಗಳನ್ನು ಕರ್ನಾಟಕದಾದ್ಯಂತ ಹರಡಿರುವ ಶಿಕ್ಷಕರಿಂದ ವರ್ಷದುದ್ದಕ್ಕೂ ಸಂಗ್ರಹಿಸಿ, ಅವುಗಳನ್ನು ಸರಣಿಯ ರೂಪದಲ್ಲಿ ವಿವಿಧ ಪಾಡ್ಕಾಸ್ಟ್ ಜಾಲತಾಣಗಳಲ್ಲಿ ಬಿಡುಗಡೆ ಮಾಡಿ, ಅವುಗಳನ್ನು ಸರ್ಕಾರಿ ಶಾಲೆಗಳ ಶಿಕ್ಷಕರೊಂದಿಗೆ ವಾಟ್ಸಾಪ್‌ನ ಮೂಲಕ ಹಂಚಿಕೊಳ್ಳಬೇಕೆಂಬುದು ನಮ್ಮ ಉದ್ದೇಶ.

ಗಣಿತದ ಆವಿಷ್ಕಾರಗಳು, ಗಡಿನಾಡಿನ ಮಕ್ಕಳಲ್ಲಿ ಕನ್ನಡ ಕವಿತೆಗಳು, ನಾಣ್ಯ ಸಂಗ್ರಹಣೆ, ಶಾಲಾ ಅಭಿವೃದ್ಧಿ, ವಿಜ್ಞಾನದ ಲ್ಯಾಬ್, ಕ್ರೀಡೆ ಹಾಗೂ ದೈಹಿಕ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಸಾಧನೆ ಮುಂತಾದ ಹಲವಾರು ವಿಷಯಗಳನ್ನು ಒಳಗೊಂಡ ಪ್ರತಿಬಿಂಬ ಪಾಡ್ಕಾಸ್ಟ್, ಎರಡು ಸರಣಿಗಳೊಂದಿಗೆ ಇಪ್ಪತ್ತು ಸಂಚಿಕೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಉತ್ತಮ ಪ್ರತಿಕ್ರಿಯೆಯನ್ನು ಗಳಿಸಿದೆ. ಇದರ ಮೂರನೇ ಸರಣಿಯು ಪ್ರಸ್ತುತ ಚಾಲ್ತಿಯಲ್ಲಿದ್ದು ಸಂಚಿಕೆಗಳನ್ನು ವಾಟ್ಸಾಪ್ ಮೂಲಕ ಪೋಷಕರು, ಶಿಕ್ಷಕರು ಹಾಗೂ ಇಲಾಖೆಯ ಅಧಿಕಾ-ರಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ಪ್ರತಿಬಿಂಬ ಸಂಚಿಕೆಗಳನ್ನು ಅಕ್ಷರ ಫೌಂಡೇಶನ್‌ನ ವೆಬ್ಸೈಟ್ ನಲ್ಲಿ ಕೇಳಬಹುದಾಗಿದೆ. https://akshara.org.in/podcast/

ಆಸಕ್ತ ಶಿಕ್ಷಕರು ತಮ್ಮ ಅನುಭವಗಳು / ಯಶೋಗಾಥೆ /ತರಗತಿಯ ಆವಿಷ್ಕಾರ ಇತ್ಯಾದಿ ವಿಷಯಗಳ ಬಗ್ಗೆ ಸಣ್ಣ ಆಡಿಯೋವನ್ನು ತಮ್ಮ ಫೋನಿನಲ್ಲಿ ರೆಕಾರ್ಡ್ ಮಾಡಿ, ಅಕ್ಷರ ಸಹಾಯವಾಣಿ ಸಂಖ್ಯೆಗೆ 98450 79590 ವಾಟ್ಸಾಪ್ ಮೂಲಕ ಕಳಿಸಬಹುದು. ಆಯ್ಕೆಯಾದ ಶಿಕ್ಷಕರ ಜೊತೆ ಅಕ್ಷರ ತಂಡದ ನಿರೂಪಕರು ಸಂಭಾಷಣೆ ನಡೆಸಿ, ಪಾಡ್ಕಾಸ್ಟ್‌ಅನ್ನು ರೆಕಾರ್ಡ್ ಮಾಡುತ್ತಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಶಿಕ್ಷಕರಿಗೂ ಅಭಿನಂದನಾ ಪತ್ರವನ್ನು ನೀಡಲಾಗುತ್ತದೆ.